**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**

(ವಿಶೇಷ ಸಂಚಿಕೆ)

**भाग IX अनुभाग 1**

**PART IX SECTION 1**

ಭಾಗ **IX** ವಿಭಾಗ **1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | | |
|---|---|---|---|
| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |

**Ministry of Law, Justice & Company Affairs**

(Legislative Department)

New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷಗಳ ಅಧಿನಿಯಮ, 1958

(ಆಗಸ್ಟ್ 28, 1958)

(1958ರ ಅಧಿನಿಯಮ ಸಂಖ್ಯೆ 24)

ರಾಷ್ಟ್ರೀಯ ಮಹತ್ವದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಪರಿರಕ್ಷಣೆಗಾಗಿ, ಪುರಾತತ್ವ ಉತ್ಖನನ ನಿಯಂತ್ರಣಕ್ಕಾಗಿ ಮತ್ತು ಶಿಲ್ಪ, ಕೆತ್ತನೆಗಳು ಮತ್ತು ಇತರ ಅಂಥಹುದೇ ವಸ್ತುಗಳ ಸಂರಕ್ಷಣೆಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಒಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:—

## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:**—(1) ಈ ಅಧಿನಿಯಮವನ್ನು ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 ಎಂದು ಕರೆಯತಕ್ಕದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದು.

2. **ಪರಿಭಾಷೆಗಳು:**—ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—

(ಕ) "ಪ್ರಾಚೀನ ಸ್ಮಾರಕ" ಎಂದರೆ, ಐತಿಹಾಸಿಕ, ಪುರಾತತ್ವ ಅಥವಾ ಕಲಾತ್ಮಕ ಆಸ್ಥೆಯುಳ್ಳಂಥ ಮತ್ತು ಒಂದು ನೂರು ವರ್ಷಗಳಿಗಿಂತಲೂ ಕಡಿಮೆ ಇಲ್ಲದಂತೆ ಅಸ್ತಿತ್ವದಲ್ಲಿರುವಂಥ ಯಾವುದೇ ರಚನೆ, ನಿರ್ಮಿತಿ ಅಥವಾ ಸ್ಮಾರಕ ಅಥವಾ ಯಾವುದೇ ಸಮಾಧಿ ದಿಬ್ಬ ಅಥವಾ ಹೂಳುವ ಸ್ಥಳ ಅಥವಾ ಯಾವುದೇ ಗುಹೆ, ಶಿಲಾಶಿಲ್ಪ, ಶಾಸನ ಅಥವಾ ಏಕಶಿಲೆ ಮತ್ತು ಇದು,—

(i) ಪ್ರಾಚೀನ ಸ್ಮಾರಕದ ಅವಶೇಷಗಳು;

(ii) ಪ್ರಾಚೀನ ಸ್ಮಾರಕದ ಸ್ಥಳ;

(iii) ಬೇಲಿ ಹಾಕುವುದಕ್ಕೆ, ಮುಚ್ಚುವುದಕ್ಕೆ ಅಥವಾ ಇತರ ರೀತಿಯಲ್ಲಿ ಅಂಥ ಸ್ಮಾರಕವನ್ನು ಪರಿರಕ್ಷಿಸುವುದಕ್ಕೆ ಅಗತ್ಯವಾಗಬಹುದಾದ ಪ್ರಾಚೀನ ಸ್ಮಾರಕದ ಸ್ಥಳಕ್ಕೆ ಹೊಂದಿಕೊಂಡಿರುವಂಥ ಭೂಮಿಯ ಭಾಗ; ಮತ್ತು

(iv) ಪ್ರಾಚೀನ ಸ್ಮಾರಕಕ್ಕೆ ಪ್ರವೇಶಾವಕಾಶದ ಮತ್ತು ಅದರ ಅನುಕೂಲಕರ ಪರಿಶೀಲನೆಯ ಸಾಧನಗಳು —ಇವುಗಳನ್ನು ಒಳಗೊಳ್ಳುತ್ತದೆ.

(ಖ) "ಪುರಾತನ ವಸ್ತು" ಎಂಬುದು,—

ಒಂದು ನೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಅಸ್ತಿತ್ವದಲ್ಲಿರುವಂಥ,—

(i) ಯಾವುದೇ ನಾಣ್ಯ, ಶಿಲ್ಪ, ಹಸ್ತಪ್ರತಿ, ಶಾಸನ ಅಥವಾ ಪುರಾಲೇಖ ಅಥವಾ ಕಲೆ ಅಥವಾ ಕುಶಲ ಕಲೆಯ ಇತರ ಕೃತಿ ;

(ii) ಯಾವುದೇ ಕಟ್ಟಡ ಅಥವಾ ಗುಹೆಯಿಂದ ಬೇರ್ಪಡಿಸಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನು ಮತ್ತು ;

(iii) ಗತಕಾಲಗಳಲ್ಲಿನ ವಿಜ್ಞಾನ, ಕಲೆ, ಕುಶಲಕಲೆ, ಸಾಹಿತ್ಯ, ಧರ್ಮ, ರೂಢಿ, ನೀತಿ, ಅಥವಾ ರಾಜಕಾರಣವನ್ನು ವಿವರಿಸುವ ಯಾವುದೇ ವಸ್ತು ಅಥವಾ ಪದಾರ್ಥ ;

(iv) ಐತಿಹಾಸಿಕ ಆಸ್ಥೆಯುಳ್ಳ ಯಾವುದೇ ವಸ್ತು ಅಥವಾ ಪದಾರ್ಥ ಮತ್ತು;

(v) ಈ ಅಧಿನಿಯಮದ ಉದ್ದೇಶಗಳಿಗಾಗಿ, ಪುರಾತನ ವಸ್ತುವೆಂಬುದಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನು

—ಇವುಗಳನ್ನು ಒಳಗೊಳ್ಳುತ್ತವೆ.

(ಗ) "ಪುರಾತತ್ವ ಅಧಿಕಾರಿ" ಎಂದರೆ, ಪುರಾತನವಸ್ತುಗಳ ಸಹಾಯಕ ಸೂಪರಿಂಟೆಂಡೆಂಟ್ ದರ್ಜೆಗಿಂತ ಕಡಿಮೆಯಿಲ್ಲದ, ಭಾರತ ಸರ್ಕಾರದ ಪುರಾತತ್ವ ಇಲಾಖೆಯ ಅಧಿಕಾರಿ.

(ಘ) "ಪುರಾತತ್ವ ಸ್ಥಳ ಮತ್ತು ಅವಶೇಷಗಳು" ಎಂದರೆ, ಒಂದು ನೂರು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಅಸ್ತಿತ್ವದಲ್ಲಿರುವಂಥ ಐತಿಹಾಸಿಕ ಅಥವಾ ಪುರಾತತ್ವ ಮಹತ್ವವುಳ್ಳ ಭಗ್ನಾವಶೇಷಗಳು ಅಥವಾ ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುವ ಅಥವಾ ಒಳಗೊಂಡಿವೆ ಎಂದು ಯುಕ್ತವಾಗಿ ನಂಬಿರುವಂಥ ಯಾವುದೇ ಪ್ರದೇಶ ಮತ್ತು ಇದು,—

(i) ಆ ಪ್ರದೇಶಕ್ಕೆ ಬೇಲಿ ಹಾಕುವುದಕ್ಕೆ ಅಥವಾ ಮುಚ್ಚುವುದಕ್ಕೆ ಅಥವಾ ಅನ್ಯಥಾ ಪರಿರಕ್ಷಿಸುವುದಕ್ಕಾಗಿ ಅಗತ್ಯವಾಗಬಹುದಾದ ಆ ಪ್ರದೇಶಕ್ಕೆ ಹೊಂದಿಕೊಂಡಂತಿರುವಂಥ ಭೂಮಿಯ ಭಾಗ ; ಮತ್ತು

(ii) ಆ ಪ್ರದೇಶದ ಪ್ರವೇಶಾವಕಾಶಕ್ಕೆ ಮತ್ತು ಅದರ ಅನುಕೂಲಕರ ಪರಿಶೀಲನೆಯ ಸಾಧನಗಳು

—ಇವುಗಳನ್ನು ಒಳಗೊಳ್ಳುತ್ತದೆ.

(ಐ) "ಮಹಾನಿರ್ದೇಶಕ" ಎಂದರೆ, ಪುರಾವಸ್ತು ಮಹಾನಿರ್ದೇಶಕ ಮತ್ತು ಅದು ಮಹಾನಿರ್ದೇಶಕನ ಕರ್ತವ್ಯಗಳನ್ನು ನೆರವೇರಿಸಲು ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ ;

(ಚ) "ಸುಸ್ಥಿತಿಯಲ್ಲಿಡುವುದು" ಎಂಬುದು,ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಂವಾದಿ ಪದಾವಳಿಯೊಂದಿಗೆ ಸಂರಕ್ಷಿತ ಸ್ಮಾರಕಕ್ಕೆ ಬೇಲಿ ಹಾಕುವುದು, ಮುಚ್ಚುವುದು, ದುರಸ್ತಿ ಮಾಡುವುದು,ಪೂರ್ವಸ್ಥಿತಿಗೆ ತರುವುದು ಮತ್ತು ಸ್ವಚ್ಛಗೊಳಿಸುವುದು ಮತ್ತು ಸಂರಕ್ಷಿತ ಸ್ಮಾರಕವನ್ನು ಪರಿರಕ್ಷಿಸುವ ಅಥವಾ ಅದಕ್ಕೆ ಅನುಕೂಲಕರ ಪ್ರವೇಶಾವಕಾಶವನ್ನು ಒದಗಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಯಾವುದೇ ಕಾರ್ಯವನ್ನು ಮಾಡುವುದು

—ಇವುಗಳನ್ನು ಒಳಗೊಳ್ಳುತ್ತದೆ.

(ಛ) "ಒಡೆಯ" ಎಂಬುದು,—

(i) ಅವನ ಪರ ಮತ್ತು ಇತರ ಜಂಟಿ ಒಡೆಯರ ಪರವಾಗಿ ವ್ಯವಸ್ಥಾಪನೆಯ ಅಧಿಕಾರಗಳನ್ನು ನಿಹಿತಗೊಳಿಸಿದ ಜಂಟಿ ಒಡೆಯ ಮತ್ತು ಯಾವನೇ ಅಂಥ ಒಡೆಯನ ಪದದ ಉತ್ತರಾಧಿಕಾರಿ, ಮತ್ತು

(ii) ವ್ಯವಸ್ಥಾಪನೆಯ ಅಧಿಕಾರಗಳನ್ನು ಚಲಾಯಿಸುವ ಯಾವನೇ ವ್ಯವಸ್ಥಾಪಕ ಅಥವಾ ನ್ಯಾಸಧಾರಿ ಮತ್ತು ಯಾವನೇ ಅಂಥ ವ್ಯವಸ್ಥಾಪಕ ಅಥವಾ ನ್ಯಾಸಧಾರಿಯ ಪದದ ಉತ್ತರಾಧಿಕಾರಿ

—ಇವರನ್ನು ಒಳಗೊಳ್ಳುತ್ತದೆ.

(ಜ) "ನಿಯಮಿಸಲಾದದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದದು;

(ಝ) " ಸಂರಕ್ಷಿತ ಪ್ರದೇಶ "ಎಂದರೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವವುಳ್ಳದ್ದೆಂದು ಘೋಷಿಸಲಾದಂಥ ಯಾವುದೇ ಪುರಾತತ್ವ ಸ್ಥಳ ಮತ್ತು ಅವಶೇಷಗಳು;

(ಞ) " ಸಂರಕ್ಷಿತ ಸ್ಮಾರಕ" ಎಂದರೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವವುಳ್ಳದ್ದೆಂದು ಘೋಷಿಸಲಾದಂಥ ಯಾವುದೇ ಸ್ಮಾರಕ.

2ಕ. **ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕಾನೂನಿಗೆ ಮಾಡಿದ ಉಲ್ಲೇಖದ ಅರ್ಥಾನ್ವಯ:**—ಈ ಅಧಿನಿಯಮದಲ್ಲಿ, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದಂಥ ಯಾವುದೇ ಕಾನೂನಿಗೆ ಮಾಡಿದ ಯಾವುದೇ ಉಲ್ಲೇಖವನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ, ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

## ರಾಷ್ಟ್ರೀಯ ಮಹತ್ವವುಳ್ಳ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು

**3. ಕೆಲವು ಪ್ರಾಚೀನ ಸ್ಮಾರಕಗಳು, ಇತ್ಯಾದಿಗಳನ್ನು ರಾಷ್ಟ್ರೀಯ ಮಹತ್ವವುಳ್ಳವುಗಳೆಂದು ಭಾವಿಸತಕ್ಕದ್ದು:**— ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷಗಳ (ರಾಷ್ಟ್ರೀಯ ಮಹತ್ವದ ಘೋಷಣೆ) ಅಧಿನಿಯಮ, 1951 (1951ರ 71)ರ ಮೂಲಕ ಅಥವಾ ರಾಜ್ಯಗಳ ಪುನರ್ರಚನಾ ಅಧಿನಿಯಮ, 1956ರ (1956ರ 37) 126ನೇ ಪ್ರಕರಣದ ಮೂಲಕ ರಾಷ್ಟ್ರೀಯ ಮಹತ್ವವುಳ್ಳವುಗಳೆಂದು ಘೋಷಿಸಲಾಗಿರುವಂಥ ಎಲ್ಲಾ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಎಲ್ಲಾ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳನ್ನು, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಷ್ಟ್ರೀಯ ಮಹತ್ವವುಳ್ಳವುಗಳೆಂದು ಘೋಷಿಸಿದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಅಥವಾ ಪುರಾವಸ್ತು ಸ್ಥಳಗಳು ಮತ್ತು ಅವಶೇಷಗಳೆಂಬುದಾಗಿ ಭಾವಿಸತಕ್ಕದ್ದು.

4. **ಪ್ರಾಚೀನ ಸ್ಮಾರಕಗಳು, ಇತ್ಯಾದಿಗಳನ್ನು ರಾಷ್ಟ್ರೀಯ ಮಹತ್ವವುಳ್ಳವುವೆಂದು ಘೋಷಿಸಲು ಕೇಂದ್ರ ಸರ್ಕಾರದ ಅಧಿಕಾರ:**— (1) ಕೇಂದ್ರ ಸರ್ಕಾರವು, 3ನೇ ಪ್ರಕರಣದಲ್ಲಿ ಒಳಗೊಂಡಿಲ್ಲದ ಯಾವುದೇ ಪ್ರಾಚೀನ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳು ರಾಷ್ಟ್ರೀಯ ಮಹತ್ವವುಳ್ಳವೆಂದು ಅಭಿಪ್ರಾಯ ಪಡುವಲ್ಲಿ ಅದು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಪ್ರಾಚೀನ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳು ರಾಷ್ಟ್ರೀಯ ಮಹತ್ವವುಳ್ಳವೆಂದು ಘೋಷಿಸುವ ಅದರ ಉದ್ದೇಶದ ಬಗ್ಗೆ ಎರಡು ತಿಂಗಳುಗಳ ನೋಟೀಸನ್ನು ಕೊಡಬಹುದು ಮತ್ತು ಅಂಥ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು ಸಂದರ್ಭಾನುಸಾರ ಸ್ಮಾರಕ ಅಥವಾ ಸ್ಥಳ ಮತ್ತು ಅವಶೇಷಗಳ ಹತ್ತಿರ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು.

(2) ಯಾವುದೇ ಅಂಥ ಪ್ರಾಚೀನ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯು, ಆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಎರಡು ತಿಂಗಳೊಳಗಾಗಿ, ಆ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳು ರಾಷ್ಟ್ರೀಯ ಮಹತ್ವವುಳ್ಳವೆಂದು ಮಾಡಿರುವ ಘೋಷಣೆಯ ಬಗ್ಗೆ ಆಕ್ಷೇಪಿಸಬಹುದು.

(3) ಸದರಿ ಎರಡು ತಿಂಗಳ ಅವಧಿಯು ಮುಕ್ತಾಯವಾದ ಮೇಲೆ, ಕೇಂದ್ರ ಸರ್ಕಾರವು ಅದು ಸ್ವೀಕರಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವನ್ನು ಪರ್ಯಾಲೋಚಿಸಿದ ತರುವಾಯ, ಸಂದರ್ಭಾನುಸಾರ ಪ್ರಾಚೀನ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳನ್ನು ರಾಷ್ಟ್ರೀಯ ಮಹತ್ವವುಳ್ಳವೆಂದು ಮಾಡಿರುವ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಬಹುದು.

(4) (3) ನೇ ಉಪ—ಪ್ರಕರಣದ ಮೇರೆಗೆ ಪ್ರಕಟಿಸಿದ ಅಧಿಸೂಚನೆಯು, ಅದನ್ನು ಹಿಂತೆಗೆದುಕೊಂಡ ಹೊರತು ಮತ್ತು ಆವರೆಗೆ, ಅದು ಸಂಬಂಧಪಟ್ಟಿರುವಂಥ ಪ್ರಾಚೀನ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳು, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಷ್ಟ್ರೀಯ ಮಹತ್ವವುಳ್ಳವುಗಳು ಎಂಬ ಸಂಗತಿಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

## ಸಂರಕ್ಷಿತ ಸ್ಮಾರಕಗಳು

5. ಸಂರಕ್ಷಿತ ಸ್ಮಾರಕದಲ್ಲಿನ ಹಕ್ಕುಗಳ ಆರ್ಜನೆ:— (1) ಮಹಾನಿರ್ದೇಶಕನು ಕೇಂದ್ರ ಸರ್ಕಾರದ ಮಂಜೂರಾತಿಯೊಂದಿಗೆ ಯಾವುದೇ ಸಂರಕ್ಷಿತ ಸ್ಮಾರಕವನ್ನು ಖರೀದಿಸಬಹುದು ಅಥವಾ ಅದನ್ನು ಗೇಣಿಗೆ ಪಡೆಯಬಹುದು ಅಥವಾ ದಾನವಾಗಿ ಅಥವಾ ಮರಣಶಾಸನ ದಾನವಾಗಿ ಅಂಗೀಕರಿಸಬಹುದು.

(2) ಸಂರಕ್ಷಿತ ಸ್ಮಾರಕಕ್ಕೆ ಒಡೆಯನಿಲ್ಲದಿರುವಲ್ಲಿ, ಮಹಾನಿರ್ದೇಶಕನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಸ್ಮಾರಕದ ಪಾಲಕತ್ವವನ್ನು ವಹಿಸಿಕೊಳ್ಳಬಹುದು.

(3) ಯಾವುದೇ ಸಂರಕ್ಷಿತ ಸ್ಮಾರಕದ ಒಡೆಯನು ಲಿಖಿತ ಪತ್ರದ ಮೂಲಕ ಮಹಾನಿರ್ದೇಶಕನನ್ನು ಆ ಸ್ಮಾರಕದ ಪಾಲಕನನ್ನಾಗಿ ಮಾಡಬಹುದು ಮತ್ತು ಮಹಾನಿರ್ದೇಶಕನು ಕೇಂದ್ರ ಸರ್ಕಾರದ ಮಂಜೂರಾತಿಯೊಂದಿಗೆ ಅಂಥ ಪಾಲಕತ್ವವನ್ನು ಅಂಗೀಕರಿಸಬಹುದು.

(4) ಮಹಾನಿರ್ದೇಶಕನು (3)ನೇ ಉಪ ಪ್ರಕರಣದ ಮೇರೆಗೆ ಸ್ಮಾರಕದ ಪಾಲಕತ್ವವನ್ನು ಅಂಗೀಕರಿಸಿರುವಾಗ, ಒಡೆಯನು, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವಂತೆ ಹೊರತು, ಮಹಾನಿರ್ದೇಶಕನನ್ನು ಅದರ ಪಾಲಕನನ್ನಾಗಿ ಮಾಡಿಲ್ಲದಿದ್ದರೆ ಹೇಗೋ ಹಾಗೆ ಸ್ಮಾರಕದಲ್ಲಿ ಮತ್ತು ಆ ಸ್ಮಾರಕಕ್ಕೆ ಅದೇ ಸಂಪದ, ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ಹೊಂದಿರತಕ್ಕದ್ದು.

(5) ಮಹಾನಿರ್ದೇಶಕನು (3)ನೇ ಉಪ—ಪ್ರಕರಣದ ಮೇರೆಗೆ ಸ್ಮಾರಕದ ಪಾಲಕತ್ವವನ್ನು ಅಂಗೀಕರಿಸಿರುವಾಗ 6ನೇ ಪ್ರಕರಣದ ಮೇರೆಗೆ ಬರೆದುಕೊಟ್ಟ ಒಪ್ಪಂದಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳು, ಸದರಿ ಉಪ ಪ್ರಕರಣದ ಮೇರೆಗೆ ಬರೆದುಕೊಟ್ಟ ಬರಹದಲ್ಲಿನ ಒಪ್ಪಂದಗಳಿಗೆ ಅನ್ವಯವಾಗತಕ್ಕದ್ದು.

(6) ಈ ಪ್ರಕರಣದಲ್ಲಿರುವುದಾವುದೂ, ರೂಢಿಗತ ಧಾರ್ಮಿಕ ಆಚರಣೆಗಳಿಗಾಗಿ, ಯಾವುದೇ ಸಂರಕ್ಷಿತ ಸ್ಮಾರಕವನ್ನು ಉಪಯೋಗಿಸುವುದರ ಬಗ್ಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

6. ಒಪ್ಪಂದದ ಮೂಲಕ ಸಂರಕ್ಷಿತ ಸ್ಮಾರಕದ ಪರಿರಕ್ಷಣೆ:—(1) ಕಲೆಕ್ಟರನು, ಕೇಂದ್ರ ಸರ್ಕಾರವು ಹಾಗೆ ನಿರ್ದೇಶಿಸಿದಾಗ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕೇಂದ್ರ ಸರ್ಕಾರದೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಂರಕ್ಷಿತ ಸ್ಮಾರಕದ ಒಡೆಯನಿಗೆ ಸೂಚಿಸತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಒಪ್ಪಂದವು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:—

(ಕ) ಸ್ಮಾರಕವನ್ನು ಸುಸ್ಥಿತಿಯಲ್ಲಿಡುವುದು;

(ಖ) ಸ್ಮಾರಕದ ಅಭಿರಕ್ಷೆ ಮತ್ತು ಅದನ್ನು ಕಾಯಲು ನಿಯೋಜಿಸಬಹುದಾದ ಯಾವನೇ ವ್ಯಕ್ತಿಯ ಕರ್ತವ್ಯಗಳು;

(ಗ) (i) ಯಾವುದೇ ಉದ್ದೇಶಕ್ಕಾಗಿ ಸ್ಮಾರಕವನ್ನು ಉಪಯೋಗಿಸಲು;

(ii) ಸ್ಮಾರಕದೊಳಗೆ ಪ್ರವೇಶಿಸುವುದಕ್ಕಾಗಿ ಅಥವಾ ಅದರ ಪರಿಶೀಲನೆಗಾಗಿ ಯಾವುದೇ ಫೀಜನ್ನು ವಿಧಿಸಲು;

(iii) ಸ್ಮಾರಕವನ್ನು ನಾಶಪಡಿಸಲು, ತೆಗೆದುಹಾಕಲು, ಬದಲಾಯಿಸಲು ಅಥವಾ ವಿರೂಪಗೊಳಿಸಲು; ಅಥವಾ

(iv) ಸ್ಮಾರಕದ ಸ್ಥಳದ ಮೇಲೆ ಅಥವಾ ಅದರ ಹತ್ತಿರ ಕಟ್ಟಡ ಕಟ್ಟಲು

—ಒಡೆಯನ ಹಕ್ಕಿನ ಬಗ್ಗೆ ಪರಿಬಂಧ;

(ಘ) ಸಾರ್ವಜನಿಕರಿಗೆ ಅಥವಾ ಅವರ ಯಾವುದೇ ವರ್ಗಕ್ಕೆ ಅನುಮತಿಸಬೇಕಾದ ಪ್ರವೇಶಾವಕಾಶ ಅಥವಾ ಸ್ಮಾರಕವನ್ನು ಪರಿಶೀಲಿಸಲು ಅಥವಾ ಸುಸ್ಥಿತಿಯಲ್ಲಿಟ್ಟುಕೊಂಡು ಬರಲು ಪುರಾತತ್ವ ಅಧಿಕಾರಿಗಳು ಅಥವಾ ಒಡೆಯನು ಪ್ರತಿನಿಯೋಜಿಸಿದ ವ್ಯಕ್ತಿಗಳಿಗೆ ಅಥವಾ ಯಾವನೇ ಪುರಾತತ್ವ ಅಧಿಕಾರಿ ಅಥವಾ ಕಲೆಕ್ಟರನಿಗೆ ಅನುಮತಿಸಬೇಕಾದ ಪ್ರವೇಶಾವಕಾಶದ ಸೌಲಭ್ಯಗಳು;

(ಙ) ಒಡೆಯನು ಆ ಸ್ಮಾರಕವು ಇರುವಂಥ ಭೂಮಿ ಅಥವಾ ಹೊಂದುಕೊಂಡಿರುವ ಯಾವುದೇ ಭೂಮಿಯನ್ನು ಮಾರಾಟಕ್ಕಾಗಿ ಕೊಡ ಮಾಡಿರುವ ಸಂದರ್ಭದಲ್ಲಿ, ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ನೋಟೀಸು ಮತ್ತು ಅಂಥ ಭೂಮಿ ಅಥವಾ ಅಂಥ ಭೂಮಿಯ ಯಾವುದೇ ನಿರ್ದಿಷ್ಟಪಡಿಸಿದ ಭಾಗವನ್ನು ಅದರ ಮಾರುಕಟ್ಟೆ ಮೌಲ್ಯಕ್ಕೆ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಕಾಯ್ದಿಡಬೇಕಾದ ಹಕ್ಕು;

(ಚ) ಆ ಸ್ಮಾರಕವನ್ನು ಸುಸ್ಥಿತಿಯಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಒಡೆಯ ಅಥವಾ ಕೇಂದ್ರ, ಸರ್ಕಾರ ವಹಿಸಿದ ಯಾವುದೇ ವೆಚ್ಚಗಳ ಸಂದಾಯ;

(ಛ) ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಯಾವುದೇ ವೆಚ್ಚಗಳನ್ನು ವಹಿಸಿದಾಗ ಆ ಸ್ಮಾರಕಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಬೇಕಾದಂಥ ಮಾಲೀಕತ್ವ ಅಥವಾ ಇತರ ಹಕ್ಕುಗಳು;

(ಜ) ಆ ಒಪ್ಪಂದದಿಂದ ಉದ್ಭವಿಸುವಂಥ ಯಾವುದೇ ವಿವಾದವನ್ನು ತೀರ್ಮಾನಿಸಲು ಪ್ರಾಧಿಕಾರದ ನೇಮಕಾತಿ; ಮತ್ತು

(ಝ) ಒಡೆಯ ಮತ್ತು ಕೇಂದ್ರ ಸರ್ಕಾರದ ನಡುವಣ ಒಪ್ಪಂದದ ಸರಿಯಾದ ವಸ್ತು ವಿಷಯವಾಗಿರುವಂಥ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯ.

(3) ಕೇಂದ್ರ ಸರ್ಕಾರ ಅಥವಾ ಒಡೆಯನು ಈ ಪ್ರಕರಣದ ಮೇರೆಗೆ ಒಪ್ಪಂದವನ್ನು ಬರೆದುಕೊಟ್ಟ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ, ಯಾವುದೇ ಕಾಲದಲ್ಲಿ ಆ ಇತರ ಪಕ್ಷಕಾರನಿಗೆ ಬರಹದಲ್ಲಿ ಆರು ತಿಂಗಳುಗಳ ನೋಟೀಸನ್ನು ಕೊಟ್ಟ ಮೇಲೆ ಅದನ್ನು ಕೊನೆಗೊಳಿಸಬಹುದು :

ಪರಂತು, ಒಡೆಯನು ಆ ಒಪ್ಪಂದವನ್ನು ಕೊನೆಗೊಳಿಸಿರುವಲ್ಲಿ, ಅವನು ಕೇಂದ್ರ ಸರ್ಕಾರಕ್ಕೆ, ಒಪ್ಪಂದವನ್ನು ಕೊನೆಗೊಳಿಸುವುದಕ್ಕೆ ನಿಕಟಪೂರ್ವದ ಐದು ವರ್ಷಗಳ ಅವಧಿಯಲ್ಲಿ ಅಥವಾ ಒಪ್ಪಂದವು ಇನ್ನೂ ಕಡಿಮೆ ಅವಧಿಗಾಗಿ ಜಾರಿಯಲ್ಲಿದ್ದರೆ ಒಪ್ಪಂದವು ಜಾರಿಯಲ್ಲಿದ್ದ ಅವಧಿಯಲ್ಲಿ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದರ ಬಗ್ಗೆ ಅದು ವಹಿಸಿದ ವೆಚ್ಚಗಳು ಯಾವುವಾದರೂ ಇದ್ದರೆ ಅವುಗಳನ್ನು ಸಂದಾಯ ಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗಿನ ಒಪ್ಪಂದವು ಅದು ಸಂಬಂಧಪಡುವಂಥ ಸ್ಮಾರಕದ ಒಡೆಯನೆಂದು ಆ ಒಪ್ಪಂದವನ್ನು ಯಾರು ಅಥವಾ ಯಾರ ಪರವಾಗಿ ಬರೆದುಕೊಡಲಾಯಿತೋ ಆ ಪಕ್ಷಕಾರನಿಂದ, ಅವನ ಮೂಲಕ ಅಥವಾ ಅವನ ಅಧೀನದಲ್ಲಿ ಕ್ಲೇಮು ಮಾಡುವ ಯಾವನೇ ವ್ಯಕ್ತಿಯ ಮೇಲೆ ಬಂಧನಕಾರಿಯಾಗಿರತಕ್ಕದ್ದು.

**7. ಅಸಮರ್ಥತೆಯಲ್ಲಿರುವ ಅಥವಾ ಸ್ವಾಧೀನದಲ್ಲಿಲ್ಲದ ಒಡೆಯರು:—** (1) ಸಂರಕ್ಷಿತ ಸ್ಮಾರಕದ ಒಡೆಯನು ಬಾಲ್ಯಾವಸ್ಥೆ ಅಥವಾ ಇತರ ಅಸಮರ್ಥತೆಯಿಂದಾಗಿ ಅವನು ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದರೆ, ಅವನ ಪರವಾಗಿ ಕಾರ್ಯ ನಿರ್ವಹಿಸಲು ಕಾನೂನುಬದ್ಧವಾಗಿ ಸಕ್ಷಮನಾದ ವ್ಯಕ್ತಿಯು 6ನೇ ಪ್ರಕರಣದ ಮೂಲಕ ಒಡೆಯನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು.

(2) ಗ್ರಾಮದ ಸ್ವತ್ತಿನ ಸಂದರ್ಭದಲ್ಲಿ, ಅಂಥ ಸ್ವತ್ತಿನ ಮೇಲೆ ವ್ಯವಸ್ಥಾಪನೆಯ ಅಧಿಕಾರಗಳನ್ನು ಚಲಾಯಿಸುವ ಮುಖ್ಯಸ್ಥ ಅಥವಾ ಇತರ ಗ್ರಾಮಾಧಿಕಾರಿಯು, 6ನೇ ಪ್ರಕರಣದ ಮೂಲಕ ಒಡೆಯನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು.

(3) ಈ ಪ್ರಕರಣದಲ್ಲಿರುವುದಾವುದೂ, ಯಾವ ವ್ಯಕ್ತಿಯ ಪರವಾಗಿ ಅವನು ಕಾರ್ಯನಿರ್ವಹಿಸುತ್ತಿರುವನೋ ಆ ವ್ಯಕ್ತಿಯಂತೆ ಅದೇ ಧರ್ಮದವನಾಗಿಲ್ಲದ ಯಾವನೇ ವ್ಯಕ್ತಿಯನ್ನು, ಯಾವ ಸಂರಕ್ಷಿತ ಸ್ಮಾರಕ ಅಥವಾ ಅದರ ಯಾವುದೇ ಭಾಗವನ್ನು ಧಾರ್ಮಿಕ ಆರಾಧನೆ ಅಥವಾ ಆ ಧರ್ಮದ ಆಚರಣೆಗಳಿಗಾಗಿ ಉಪಯೋಗಿಸಲಾಗುತ್ತಿದೆಯೋ ಆ ಸಂರಕ್ಷಿತ ಸ್ಮಾರಕ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಒಪ್ಪಂದವನ್ನು ಮಾಡಿಕೊಳ್ಳಲು ಅಥವಾ ಬರೆದುಕೊಡಲು, ಶಕ್ತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**8. ಸಂರಕ್ಷಿತ ಸ್ಮಾರಕವನ್ನು ದುರಸ್ತಿ ಮಾಡಲು ದತ್ತಿಯ ವಿನಿಯೋಗ:—**(1) ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ 6ನೇ ಪ್ರಕರಣದ ಮೇರೆಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಕ್ಷಮನಾದ ಯಾವನೇ ಒಡೆಯ ಅಥವಾ ಇತರ ವ್ಯಕ್ತಿಯು, ಅಂಥ ಒಪ್ಪಂದವನ್ನು ಮಾಡಿಕೊಳ್ಳಲು ನಿರಾಕರಿಸಿದರೆ ಅಥವಾ ತಪ್ಪಿದರೆ ಮತ್ತು ಅಂಥ ಸ್ಮಾರಕವನ್ನು ದುರಸ್ತಿಯಲ್ಲಿಡುವ ಉದ್ದೇಶಕ್ಕಾಗಿ ಅಥವಾ ಇತರ ಉದ್ದೇಶಗಳ ಪೈಕಿ ಆ ಉದ್ದೇಶಕ್ಕಾಗಿ ಯಾವುದೇ ದತ್ತಿಯನ್ನು ಸೃಜಿಸಲಾಗಿದ್ದರೆ, ಕೇಂದ್ರ ಸರ್ಕಾರವು ಅಂಥ ದತ್ತಿ ಅಥವಾ ಅದರ ಭಾಗದ ಸರಿಯಾದ ವಿನಿಯೋಗಕ್ಕಾಗಿ, ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು ಅಥವಾ ಆ ಸ್ಮಾರಕವನ್ನು ದುರಸ್ತಿಮಾಡುವುದಕ್ಕೆ ಅಂದಾಜು ಖರ್ಚು ಒಂದು ಸಾವಿರ ರೂಪಾಯಿಗಳನ್ನು ಮೀರದಿದ್ದರೆ, ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗಿನ ಅರ್ಜಿಯ ಸುನಾವಣೆಯು ಆದ ಮೇಲೆ, ಜಿಲ್ಲಾ ನ್ಯಾಯಾಧೀಶನು, ಒಡೆಯನನ್ನು ಮತ್ತು ಯಾವ ವ್ಯಕ್ತಿಯ ಸಾಕ್ಷ್ಯವು ಅವನಿಗೆ ಅವಶ್ಯವೆಂದು ಕಂಡು ಬರುವುದೋ ಆ ಯಾವನೇ ವ್ಯಕ್ತಿಯನ್ನು ಸಮನು ಮಾಡಬಹುದು ಮತ್ತು ಪರೀಕ್ಷಿಸಬಹುದು ಮತ್ತು ಆ ದತ್ತಿ ಅಥವಾ ಅದರ ಯಾವುದೇ ಭಾಗದ ಸರಿಯಾದ ವಿನಿಯೋಗಕ್ಕಾಗಿ ಆದೇಶವನ್ನು ಮಾಡಬಹುದು ಮತ್ತು ಅಂಥ ಯಾವುದೇ ಆದೇಶವನ್ನು ಅದು ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದಿದ್ದರೆ ಹೇಗೋ ಹಾಗೆ ಅಮಲ್ಜಾರಿಗೊಳಿಸಬಹುದು.

**9. ಒಪ್ಪಂದವನ್ನು ಮಾಡಿಕೊಳ್ಳಲು ತಪ್ಪುವುದು ಅಥವಾ ನಿರಾಕರಿಸುವುದು:—**(1) ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ 6ನೇ ಪ್ರಕರಣದ ಮೇರೆಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಕ್ಷಮನಾದ ಒಡೆಯ ಅಥವಾ ಇತರ ವ್ಯಕ್ತಿಯು ಅಂಥ ಒಪ್ಪಂದವನ್ನು ಮಾಡಿಕೊಳ್ಳಲು ನಿರಾಕರಿಸಿದರೆ ಅಥವಾ ತಪ್ಪಿದರೆ ಕೇಂದ್ರ ಸರ್ಕಾರವು 6ನೇ ಪ್ರಕರಣದ (2)ನೇ ಉಪ—ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಿ, ಆದೇಶವನ್ನು ಮಾಡಬಹುದು ಮತ್ತು ಅಂಥ ಆದೇಶವು, ಒಡೆಯ ಅಥವಾ ಅಂಥ ಇತರ ವ್ಯಕ್ತಿಯಿಂದ, ಅವನ ಮೂಲಕ ಅಥವಾ ಅವನ ಅಡಿಯಲ್ಲಿ ಆ ಸ್ಮಾರಕಕ್ಕೆ ಸ್ವಾಮ್ಯವನ್ನು ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಬಂಧನಕಾರಿಯಾಗಿರತಕ್ಕದ್ದು.

(2) (1)ನೇ ಉಪ—ಪ್ರಕರಣದ ಮೇರೆಗೆ ಮಾಡಿದ ಆದೇಶವು, ಒಪ್ಪಂದವನ್ನುಮಾಡಿಕೊಳ್ಳಲು ಸಕ್ಷಮನಾದ ಒಡೆಯ ಅಥವಾ ಇತರ ವ್ಯಕ್ತಿಯು ಸುಸ್ಥಿತಿಯಲ್ಲಿಟ್ಟುಕೊಂಡು ಬರತಕ್ಕದ್ದೆಂದು ಉಪಬಂಧಿಸಿರುವಲ್ಲಿ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ ಎಲ್ಲಾ ಯುಕ್ತ ವೆಚ್ಚಗಳನ್ನು ಕೇಂದ್ರ ಸರ್ಕಾರವು ಸಂದಾಯ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು, ಉದ್ದೇಶಿತ ಆದೇಶಕ್ಕೆ ವಿರುದ್ಧವಾಗಿ ಬರಹದಲ್ಲಿ ಮನವಿಯನ್ನು ಮಾಡಿಕೊಳ್ಳಲು ಅವಕಾಶವನ್ನು ಒಡೆಯ ಅಥವಾ ಇತರ ವ್ಯಕ್ತಿಗೆ ಕೊಡಲಾಗಿದ್ದ ಹೊರತು ಮಾಡತಕ್ಕದ್ದಲ್ಲ.

**10. 6ನೇ ಪ್ರಕರಣದ ಮೇರೆಗಿನ ಒಪ್ಪಂದದ ಉಲ್ಲಂಘನೆಯನ್ನು ನಿಷೇಧಿಸುವ ಆದೇಶವನು ಮಾಡುವ ಅಧಿಕಾರ:—**(1) ಮಹಾನಿರ್ದೇಶಕನು, ಸಂರಕ್ಷಿತ ಸ್ಮಾರಕದ ಒಡೆಯ ಅಥವಾ ಅಧಿಭೋಗದಾರನು (6)ನೇ ಉಪ-ಪ್ರಕರಣದ ಮೇರೆಗಿನ ಒಪ್ಪಂದದ ನಿಬಂಧನೆಗಳನ್ನು ಉಲ್ಲಂಘಿಸಿ ಆ ಸ್ಮಾರಕವನ್ನು ನಾಶಪಡಿಸಲು, ತೆಗೆದುಹಾಕಲು, ಬದಲಾಯಿಸಲು, ವಿರೂಪಗೊಳಿಸಲು, ಅಪಾಯ ಉಂಟು ಮಾಡಲು ಅಥವಾ ದುರುಪಯೋಗ ಮಾಡಲು ಉದ್ದೇಶಿಸಿರುವನೆಂದು ಅಥವಾ ಅದರ ಸ್ಥಳದ ಮೇಲೆ ಅಥವಾ ಅದರ ಹತ್ತಿರ ಕಟ್ಟಡವನ್ನು ಕಟ್ಟಲು ಉದ್ದೇಶಿಸಿರುವನೆಂದು ಶಂಕಿಸಿದರೆ, ಮಹಾನಿರ್ದೇಶಕನು, ಒಡೆಯ ಅಥವಾ ಅಧಿಭೋಗದಾರನಿಗೆ ಬರಹದಲ್ಲಿ ಮನವಿಯನ್ನು ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಒಪ್ಪಂದದ ಯಾವುದೇ ಅಂಥ ಉಲ್ಲಂಘನೆಯನ್ನು ನಿಷೇಧಿಸಿ ಆದೇಶವನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಅವಕಾಶವನ್ನು ಮಹಾನಿರ್ದೇಶಕನು ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಹಾಗೆ ಮಾಡುವುದು ಉಚಿತ ಅಥವಾ ಕಾರ್ಯಸಾಧ್ಯವಲ್ಲವೆಂದು ಮನದಟ್ಟುಮಾಡಿಕೊಂಡಿರುವಲ್ಲಿ, ಅಂಥ ಅವಕಾಶವನ್ನು ಕೊಡಬೇಕಾಗಿಲ್ಲ.

(2) ಈ ಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಕೇಂದ್ರ ಸರ್ಕಾರಕ್ಕೆ ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಅಪೀಲುಮಾಡಿಕೊಳ್ಳಬಹುದು ಮತ್ತು ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**11. ಒಪ್ಪಂದಗಳ ಜಾರಿ:**—(1) 6ನೇ ಪ್ರಕರಣದ ಮೇರೆಗೆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ ಒಪ್ಪಂದದ ಮೂಲಕ ಬದ್ಧನಾದ ಒಡೆಯನು ಅಥವಾ ಇತರ ವ್ಯಕ್ತಿಯು, ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ, ಮಹಾನಿರ್ದೇಶಕನು ಅವಶ್ಯವೆಂದು ಅಭಿಪ್ರಾಯಪಡುವಂಥ ಯಾವುದೇ ಕಾರ್ಯವನ್ನು ಮಾಡಲು ಮಹಾನಿರ್ದೇಶಕನು ನಿಗದಿಪಡಿಸಬಹುದಾದಂಥ ಯುಕ್ತ ಕಾಲದೊಳಗೆ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ ಮಹಾನಿರ್ದೇಶಕನು ಅಂಥ ಯಾವುದೇ ಕಾರ್ಯವನ್ನು ಮಾಡಲು ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದು ಮತ್ತು ಒಡೆಯನು ಅಥವಾ ಇತರ ವ್ಯಕ್ತಿಯು, ಅಂಥ ಯಾವುದೇ ಕಾರ್ಯವನ್ನು ಮಾಡಲು ತಗಲುವ ವೆಚ್ಚಗಳು ಅಥವಾ ಆ ಒಪ್ಪಂದದ ಮೇರೆಗೆ ಒಡೆಯನು ಸಂದಾಯ ಮಾಡಲು ಹೊಣೆಗಾರನಾಗಬಹುದಾದ ವೆಚ್ಚಗಳ ಅಂಥ ಭಾಗವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ಒಡೆಯನು ಅಥವಾ ಇತರ ವ್ಯಕ್ತಿಯು ಸಂದಾಯ ಮಾಡಬೇಕಾದ ವೆಚ್ಚಗಳ ಮೊಬಲಗಿನ ಬಗ್ಗೆ ಯಾವುದೇ ವಿವಾದ ಉದ್ಭವಿಸಿದರೆ, ಅದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕದ್ದು. ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**12. ಕೆಲವು ಮಾರಾಟಗಳಲ್ಲಿ ಖರೀದಿದಾರನು ಮತ್ತು ಒಡೆಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳು ಒಡೆಯನು ಬರೆದುಕೊಟ್ಟ ಪತ್ರಕ್ಕೆ ಬದ್ಧರಾಗಿರತಕ್ಕದ್ದು:**—5ನೇ ಪ್ರಕರಣ ಅಥವಾ 6ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಒಡೆಯನು ಯಾವ ಸ್ಮಾರಕಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರವನ್ನು ಬರೆದುಕೊಟ್ಟಿರುವನೋ ಆ ಸ್ಮಾರಕವು ಇರುವಂಥ ಯಾವುದೇ ಭೂಮಿಯನ್ನು ಭೂ ಕಂದಾಯದ ಅಥವಾ ಯಾವುದೇ ಇತರ ಸರ್ಕಾರಿ ತಗಾದೆಯ ಬಾಕಿಗಳಿಗಾಗಿನ ಮಾರಾಟದಲ್ಲಿ ಖರೀದಿಸುವ ಪ್ರತಿಯೊಬ್ಬ ವ್ಯಕ್ತಿಯೂ ಮತ್ತು ಅಂಥ ಯಾವುದೇ ಪತ್ರವನ್ನು ಬರೆದುಕೊಟ್ಟ ಒಡೆಯನಿಂದ, ಅವನ ಮೂಲಕ ಅಥವಾ ಅವನ ಅಧೀನವಾಗಿ ಸ್ಮಾರಕದ ಯಾವುದೇ ಸ್ವಾಮ್ಯವನ್ನು ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಲಿಖಿತಕ್ಕೆ ಬದ್ಧರಾಗಿರತಕ್ಕದ್ದು.

**13.** ಸಂರಕ್ಷಿತ ಸ್ಮಾರಕಗಳ ಅರ್ಜನೆ:—ಸಂರಕ್ಷಿತ ಸ್ಮಾರಕವು ನಾಶವಾಗುವ, ಹಾನಿಗೊಳಗಾಗುವ, ದುರುಪಯೋಗವಾಗುವ ಅಥವಾ ಕ್ಷೀಣವಾಗಲು ಅವಕಾಶವಿರುವ ಅಪಾಯವಿದೆಯೆಂದು ಕೇಂದ್ರಸರ್ಕಾರವು ಶಂಕಿಸಿದರೆ, ಅದು ಭೂ ಅರ್ಜನಾ ಅಧಿನಿಯಮ, 1894(1894ರ1)ರ ಉಪಬಂಧಗಳ ಮೇರೆಗೆ ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದು ಈ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ಉದ್ದೇಶವಾಗಿದ್ದರೆ ಹೇಗೋ ಹಾಗೆ ಆ ಸಂರಕ್ಷಿತ ಸ್ಮಾರಕವನ್ನು ಅರ್ಜಿಸಬಹುದು.

**14. ಕೆಲವು** ಸಂರಕ್ಷಿತ ಸ್ಮಾರಕಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದು:—(1) 13ನೇ ಪ್ರಕರಣದ ಮೇರೆಗೆ ಆರ್ಜಿಸಿದಂಥ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ, 5ನೇ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಹಕ್ಕನ್ನು ಆರ್ಜಿಸಲಾಗಿದೆಯೋ ಆ ಪ್ರತಿಯೊಂದು ಸ್ಮಾರಕವನ್ನು ಕೇಂದ್ರ ಸರ್ಕಾರವು ಸುಸ್ಥಿತಿಯಲ್ಲಿಟ್ಟುಕೊಂಡು ಬರತಕ್ಕದ್ದು.

(2) 5ನೇ ಪ್ರಕರಣದ ಮೇರೆಗೆ ಸ್ಮಾರಕದ ಪಾಲಕತ್ವವನ್ನು ಮಹಾನಿರ್ದೇಶಕನು ವಹಿಸಿಕೊಂಡಿರುವಾಗ, ಅವನು ಅಂಥ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವ ಉದ್ದೇಶಕ್ಕಾಗಿ, ಆ ಸ್ಮಾರಕವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಮತ್ತು ಅದನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ ಅವಶ್ಯ ಅಥವಾ ಅಪೇಕ್ಷಣೀಯವೆಂದು ಅವನು ಪರ್ಯಾಲೋಚಿಸಬಹುದಾದಂಥ ವಸ್ತುಗಳನ್ನು ತರುವ ಮತ್ತು ಅಂಥ ಕಾರ್ಯಗಳನ್ನು ಮಾಡುವ ಉದ್ದೇಶಕ್ಕಾಗಿ ಎಲ್ಲಾ ಯುಕ್ತ ವೇಳೆಗಳಲ್ಲಿ ಆ ಸ್ಮಾರಕಕ್ಕೆ ಸ್ವತಃ ಮತ್ತು ಅವನ ಏಜೆಂಟರು, ಅಧೀನರು ಮತ್ತು ಕೆಲಸಗಾರರ ಮೂಲಕ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

**15.** ಸ್ವಇಚ್ಛೆ ವಂತಿಗೆಗಳು:—ಮಹಾನಿರ್ದೇಶಕನು, ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿನ ವೆಚ್ಚಗಳಿಗಾಗಿ ಸ್ವಇಚ್ಛೆ ವಂತಿಗೆಗಳನ್ನು ಸ್ವೀಕರಿಸಬಹುದು ಮತ್ತು ಅವನು ಹಾಗೆ ಸ್ವೀಕರಿಸಿದ ಯಾವುವೇ ನಿಧಿಗಳ ವ್ಯವಸ್ಥಾಪನೆ ಮತ್ತು ವಿನಿಯೋಗದ ಬಗ್ಗೆ ಆದೇಶಗಳನ್ನು ಕೊಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಸ್ವೀಕರಿಸಲಾದ ಯಾವುದೇ ವಂತಿಗೆಯನ್ನು ಯಾವ ಉದ್ದೇಶಕ್ಕಾಗಿ ವಂತಿಗೆಯನ್ನು ಕೊಡಲಾಯಿತೋ ಆ ಉದ್ದೇಶಕ್ಕಾಗಿ ಹೊರತು ಇತರ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ.

**16.** ಆರಾಧನಾ ಸ್ಥಳವನ್ನು ದುರುಪಯೋಗಪಡಿಸಿಕೊಳ್ಳುವುದು, ಮಲಿನಗೊಳಿಸುವುದು, ಅಪವಿತ್ರಗೊಳಿಸುವುದು-**ಇವುಗಳಿಂದ ಸಂರಕ್ಷಣೆ:**— ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ಸುಸ್ಥಿತಿಯಲ್ಲಿಟ್ಟುಕೊಂಡು ಬಂದ ಆರಾಧನಾ ಸ್ಥಳ ಅಥವಾ ದೇವಾಲಯವಾಗಿರುವಂಥ ಯಾವುದೇ ಸಂರಕ್ಷಿತ ಸ್ಮಾರಕವನ್ನು ಅದರ ಸ್ವರೂಪಕ್ಕೆ ಅಸಂಗತವಾದ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, 13ನೇ ಪ್ರಕರಣದ ಮೇರೆಗೆ ಸಂರಕ್ಷಿತ ಸ್ಮಾರಕವನ್ನು ಅರ್ಜಿಸಿದ್ದಲ್ಲಿ ಅಥವಾ ಮಹಾನಿರ್ದೇಶಕನು 5ನೇ ಪ್ರಕರಣದ ಮೇರೆಗೆ ಸಂರಕ್ಷಿತ ಸ್ಮಾರಕವನ್ನು ಖರೀದಿಸಿರುವಲ್ಲಿ ಅಥವಾ ಗೇಣಿಗೆ ತೆಗೆದುಕೊಂಡಿರುವಲ್ಲಿ ಅಥವಾ ಅದನ್ನು ದಾನವಾಗಿ ಅಥವಾ ಮರಣಶಾಸನ ದಾನವಾಗಿ ಅಂಗೀಕರಿಸಿರುವಲ್ಲಿ ಅಥವಾ ಅದರ ಪಾಲಕತ್ವವನ್ನು ವಹಿಸಿಕೊಂಡಿರುವಲ್ಲಿ ಮತ್ತು ಅಂಥ ಸ್ಮಾರಕ ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಸಮುದಾಯವು ಧಾರ್ಮಿಕ ಆರಾಧನೆ ಅಥವಾ ಆಚರಣೆಗಳಿಗಾಗಿ ಉಪಯೋಗಿಸುತ್ತಿರುವಲ್ಲಿ, ಕಲೆಕ್ಟರನು,—

(ಕ) ಯಾವ ಸಮುದಾಯವು ಆ ಸ್ಮಾರಕ ಅಥವಾ ಅದರ ಭಾಗವನ್ನು ಉಪಯೋಗಿಸುತ್ತಿರುವುದೋ ಆ ಸಮುದಾಯದ ಧಾರ್ಮಿಕ ಆಚರಣೆಗಳಿಂದ ಹಾಗೆ ಪ್ರವೇಶಿಸಲು ಹಕ್ಕುಳ್ಳವನಾಗಿರದಂಥ ಯಾವನೇ ವ್ಯಕ್ತಿಯು, ಸದರಿ ಸ್ಮಾರಕ ಅಥವಾ ಅದರ ಭಾಗದ ಧಾರ್ಮಿಕ ಪ್ರಭಾರವನ್ನು ಹೊಂದಿರುವ ವ್ಯಕ್ತಿಗಳು ಯಾರಾದರೂ ಇದ್ದರೆ ಅವರ ಸಹಮತಿಯಿಂದ, ನಿಯಮಿಸಿದ ಷರತ್ತುಗಳಿಗನುಸಾರವಾಗಿ ಹೊರತು ಅದರಲ್ಲಿ ಪ್ರವೇಶಿಸುವುದನ್ನು ನಿಷೇಧಿಸುವ ಮೂಲಕ;

(ಖ) ಅವನು ಈ ಬಗ್ಗೆ ಅವಶ್ಯವೆಂದು ಯೋಚಿಸಬಹುದಾದಂಥ ಇತರ ಕ್ರಮವನ್ನು ಕೈಗೊಳ್ಳುವ ಮೂಲಕ

—ಅಂಥ ಸ್ಮಾರಕ ಅಥವಾ ಅದರ ಭಾಗವನ್ನು ಮಲಿನಗೊಳಿಸುವುದು ಅಥವಾ ಅಪವಿತ್ರಗೊಳಿಸುವುದರಿಂದ ಸಂರಕ್ಷಿಸಲು ಸೂಕ್ತ ಏರ್ಪಾಡನ್ನು ಮಾಡತಕ್ಕದ್ದು.

**17. ಸ್ಮಾರಕದ ಸರ್ಕಾರಿ ಹಕ್ಕುಗಳನ್ನು ಬಿಟ್ಟು ಕೊಡುವುದು:**—ಕೇಂದ್ರ ಸರ್ಕಾರದ ಮಂಜೂರಾತಿಯೊಂದಿಗೆ ಮಹಾನಿರ್ದೇಶಕನು,—

(ಕ) ಯಾವುದೇ ಮಾರಾಟ, ಗೇಣಿ, ದಾನ ಅಥವಾ ಮರಣಶಾಸನದ ಕಾರಣದಿಂದಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಸ್ಮಾರಕಕ್ಕೆ ಸಂಬಂಧಿಸಿದಂತೆ ಮಹಾನಿರ್ದೇಶಕನು ಹಕ್ಕುಗಳನ್ನು ಆರ್ಜನೆ ಮಾಡಿರುವಲ್ಲಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಹಕ್ಕುಗಳನ್ನು ಆರ್ಜಿಸಿರದಿದ್ದರೆ ತತ್ಕಾಲದಲ್ಲಿ ಆ ಸ್ಮಾರಕದ ಒಡೆಯನಾಗಬಹುದಾಗಿದ್ದಂಥ ವ್ಯಕ್ತಿಗೆ ಹಾಗೆ ಆರ್ಜನೆ ಮಾಡಿದ ಹಕ್ಕುಗಳನ್ನು ಅವನು ಬಿಟ್ಟುಕೊಡಬಹುದು; ಅಥವಾ

(ಖ) ಈ ಅಧಿನಿಯಮದ ಮೇರೆಗೆ ಅವನು ವಹಿಸಿಕೊಂಡಿರುವ ಸ್ಮಾರಕದ ಯಾವುದೇ ಪಾಲಕತ್ವವನ್ನು ಬಿಟ್ಟುಕೊಡಬಹುದು.

**18. ಸಂರಕ್ಷಿತ ಸ್ಮಾರಕಗಳಿಗೆ ಪ್ರವೇಶದ ಹಕ್ಕು:**—ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಸಾರ್ವಜನಿಕರು ಯಾವುದೇ ಸಂರಕ್ಷಿತ ಸ್ಮಾರಕಕ್ಕೆ ಪ್ರವೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು.

## ಸಂರಕ್ಷಿತ ಪ್ರದೇಶಗಳು

**19. ಸಂರಕ್ಷಿತ ಪ್ರದೇಶಗಳಲ್ಲಿ ಸ್ವತ್ತಿನ ಹಕ್ಕುಗಳನ್ನು ಅನುಭೋಗಿಸುವುದರ ಮೇಲೆ ಪರಿಬಂಧಗಳು:**—ಸಂರಕ್ಷಿತ ಪ್ರದೇಶದ ಒಡೆಯ ಅಥವಾ ಅನುಭೋಗದಾರನೂ ಸೇರಿದಂತೆ ಯಾವನೇ ವ್ಯಕ್ತಿಯು, ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಸಂರಕ್ಷಿತ ಪ್ರದೇಶಗಳೊಳಗೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಅಂಥ ಪ್ರದೇಶದಲ್ಲಿ ಯಾವುದೇ ಗಣಿ ಕೆಲಸ, ಕಲ್ಲು ಗಣಿ ಕೆಲಸ, ಉತ್ಖನನ, ಆಸ್ಫೋಟನ ಅಥವಾ ಅದೇ ಸ್ವರೂಪದ ಯಾವುದೇ ಕಾರ್ಯಾಚರಣೆ—ಇವುಗಳನ್ನು ನಡೆಸತಕ್ಕದ್ದಲ್ಲ ಅಥವಾ ಅಂಥ ಪ್ರದೇಶವನ್ನು ಅಥವಾ ಅದರ ಯಾವುದೇ ಭಾಗವನ್ನು ಇತರ ಯಾವುದೇ ರೀತಿಯಲ್ಲಿ ಉಪಯೋಗಿಸತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ, ಸಾಗುವಳಿಯ ಉದ್ದೇಶಗಳಿಗಾಗಿ, ಅಂತಹ ಸಾಗುವಳಿಯು ಮೇಲ್ಭಾಗದಿಂದ ಒಂದು ಅಡಿಗಿಂತ ಹೆಚ್ಚು ಮಣ್ಣನ್ನು ಅಗೆಯುವುದನ್ನು ಒಳಗೊಳ್ಳದಿದ್ದರೆ, ಯಾವುದೇ ಅಂಥ ಪ್ರದೇಶ ಅಥವಾ ಅದರ ಭಾಗದ ಉಪಯೋಗವನ್ನು ನಿಷೇಧಿಸುವುದಾಗಿ ಭಾವಿಸತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಆದೇಶದ ಮೂಲಕ (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಸಂರಕ್ಷಿತ ಪ್ರದೇಶದೊಳಗೆ ಯಾವನೇ ವ್ಯಕ್ತಿಯು ನಿರ್ಮಿಸಿದ ಯಾವುದೇ ಕಟ್ಟಡವನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ತೆಗೆದುಹಾಕತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ವ್ಯಕ್ತಿಯು ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಕಲೆಕ್ಟರನು ಆ ಕಟ್ಟಡವನ್ನು ತೆಗೆದುಹಾಕುವಂತೆ ಮಾಡಬಹುದು ಮತ್ತು ಆ ವ್ಯಕ್ತಿಯು ಹಾಗೆ ತೆಗೆದುಹಾಕುವುದರ ಖರ್ಚನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು.

**20. ಸಂರಕ್ಷಿತ ಪ್ರದೇಶವನ್ನು ಆರ್ಜಿಸಲು ಅಧಿಕಾರ:**—ಕೇಂದ್ರ ಸರ್ಕಾರವು ಯಾವುದೇ ಸಂರಕ್ಷಿತ ಪ್ರದೇಶವು ರಾಷ್ಟ್ರೀಯ ಹಿತಾಸಕ್ತಿ ಮತ್ತು ಮೌಲ್ಯದ ಪ್ರಾಚೀನ ಸ್ಮಾರಕ ಅಥವಾ ಪ್ರಾಚೀನ ವಸ್ತುಗಳನ್ನು ಒಳಗೊಂಡಿದೆಯೆಂದು ಅಭಿಪ್ರಾಯಪಟ್ಟರೆ, ಅದು ಭೂ ಆರ್ಜನಾ ಅಧಿನಿಯಮ, 1894(1894ರ 1)ರ ಉಪಬಂಧಗಳ ಮೇರೆಗೆ ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಆರ್ಜನೆಯು ಸಾರ್ವಜನಿಕ ಉದ್ದೇಶಕ್ಕಾಗಿ ಇದ್ದರೆ ಹೇಗೋ ಹಾಗೆ ಅಂಥ ಪ್ರದೇಶವನ್ನು ಆರ್ಜಿಸಬಹುದು.

## ಪುರಾತತ್ವ ಉತ್ಖನನಗಳು

**21.** ಸಂರಕ್ಷಿತ ಪ್ರದೇಶಗಳಲ್ಲಿ ಉತ್ಖನನಗಳು:—ಪುರಾತತ್ವ ಅಧಿಕಾರಿ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಅಧಿಕಾರಿ ಅಥವಾ ಈ ಅಧಿನಿಯಮದ ಮೇರೆಗೆ ಈ ಬಗ್ಗೆ ಕೊಟ್ಟ ಲೈಸೆನ್ಸನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿಯು (ಇನ್ನು ಮುಂದೆ ಲೈಸೆನ್ಸ್‌ದಾರ ಎಂದು ಉಲ್ಲೇಖಿಸಲಾಗಿದೆ) ಕಲೆಕ್ಟರನಿಗೆ ಮತ್ತು ಒಡೆಯನಿಗೆ ಬರಹದಲ್ಲಿ ನೋಟೀಸನ್ನು ಕೊಟ್ಟ ತರುವಾಯ ಯಾವುದೇ ಸಂರಕ್ಷಿತ ಪ್ರದೇಶವನ್ನು ಪ್ರವೇಶಿಸಬಹುದು ಮತ್ತು ಅದರಲ್ಲಿ ಉತ್ಖನನಗಳನ್ನು ಮಾಡಬಹುದು.

**22.** **ಸಂರಕ್ಷಿತ ಪ್ರದೇಶವನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಉತ್ಖನನಗಳು:**—ಸಂರಕ್ಷಿತ ಪ್ರದೇಶವಲ್ಲದ ಯಾವುದೇ ಪ್ರದೇಶವು ಐತಿಹಾಸಿಕ ಅಥವಾ ಪುರಾತತ್ವ ಮಹತ್ವದ ಭಗ್ನಾವಶೇಷಗಳು ಅಥವಾ ಪ್ರಾಚೀನ ಅವಶೇಷಗಳನ್ನು ಒಳಗೊಂಡಿದೆಯೆಂದು ನಂಬಲು ಪುರಾತತ್ವ ಅಧಿಕಾರಿಗೆ ಕಾರಣವಿರುವಲ್ಲಿ, ಅವನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಅಧಿಕಾರಿಯು, ಕಲೆಕ್ಟರ್ ಅಥವಾ ಒಡೆಯನಿಗೆ ಬರಹದಲ್ಲಿನ ನೋಟೀಸನ್ನು ಕೊಟ್ಟ ತರುವಾಯ ಅಂಥ ಪ್ರದೇಶವನ್ನು ಪ್ರವೇಶಿಸಬಹುದು ಮತ್ತು ಅದರಲ್ಲಿ ಉತ್ಖನನಗಳನ್ನು ಮಾಡಬಹುದು.

**23.** **ಉತ್ಖನನ ಕಾರ್ಯಾಚರಣೆಗಳ ಕಾಲದಲ್ಲಿ ಕಂಡುಬಂದ ಪುರಾತನ ವಸ್ತುಗಳು ಇತ್ಯಾದಿಗಳ ಕಡ್ಡಾಯ ಖರೀದಿ:**—21ನೇ ಪ್ರಕರಣದ ಅಥವಾ 22ನೇ ಪ್ರಕರಣದ ಮೇರೆಗೆ ಯಾವುದೇ ಪ್ರದೇಶದಲ್ಲಿ ಮಾಡಿದ ಯಾವುವೇ ಉತ್ಖನನಗಳ ಪರಿಣಾಮವಾಗಿ ಯಾವುವೇ ಪುರಾತನವಸ್ತುಗಳು ಕಂಡುಬಂದಲ್ಲಿ ಸಂದರ್ಭಾನುಸಾರ ಪುರಾತತ್ವ ಅಧಿಕಾರಿ ಅಥವಾ ಲೈಸೆನ್ಸ್‌ದಾರನು,—

(ಕ) ಕಾರ್ಯಸಾಧ್ಯವಾದಷ್ಟು ಬೇಗನೆ ಅಂಥ ಪುರಾತನವಸ್ತುಗಳನ್ನು ಪರೀಕ್ಷಿಸತಕ್ಕುದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕುದು;

(ಖ) ಉತ್ಖನನ ಕಾರ್ಯಾಚರಣೆಗಳು ಮುಕ್ತಾಯಗೊಂಡ ಮೇಲೆ, ಅಂಥ ಪುರಾತನ ವಸ್ತುಗಳನ್ನು ಯಾವ ಭೂಮಿಯಿಂದ ಕಂಡುಹಿಡಿಯಲಾಗಿದೆಯೋ ಆ ಭೂಮಿಯ ಒಡೆಯನಿಗೆ, ಅಂಥ ಪ್ರಾಚೀನ ವಸ್ತುಗಳ ಸ್ವರೂಪದ ಬಗ್ಗೆ ಬರಹದಲ್ಲಿ ನೋಟೀಸನ್ನು ಕೊಡತಕ್ಕುದು.

(2) ಅಂಥ ಯಾವುದೇ ಪುರಾತನ ವಸ್ತುಗಳ ಕಡ್ಡಾಯ ಅರ್ಜನೆಗಾಗಿ (3)ನೇ ಉಪ-ಪ್ರಕರಣದ ಮೇರೆಗೆ ಆದೇಶವನ್ನು ಮಾಡುವವರೆಗೆ ಸಂದರ್ಭಾನುಸಾರ ಪುರಾತತ್ವ ಅಧಿಕಾರಿ ಅಥವಾ ಲೈಸೆನ್ಸ್‌ದಾರನು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಂರಕ್ಷಿತ ಅಭಿರಕ್ಷೆಯಲ್ಲಿ ಅವುಗಳನ್ನು ಇಡತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗಿನ ವರದಿಯನ್ನು ಸ್ವೀಕರಿಸಿದ ತರುವಾಯ ಕೇಂದ್ರ ಸರ್ಕಾರವು ಅಂಥ ಯಾವುದೇ ಪುರಾತನ ವಸ್ತುಗಳ ಕಡ್ಡಾಯ ಅರ್ಜನೆಗಾಗಿ ಆದೇಶವನ್ನು ಮಾಡಬಹುದು.

(4) (3)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಪುರಾತನ ವಸ್ತುಗಳ ಕಡ್ಡಾಯ ಅರ್ಜನೆಗಾಗಿ ಆದೇಶವನ್ನು ಮಾಡಿದಾಗ ಅಂಥ ಪುರಾತನ ವಸ್ತುಗಳು ಆದೇಶದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕುದು.

**24.** **ಪುರಾತತ್ವಗಳ ಉದ್ದೇಶಗಳಿಗಾಗಿ ಉತ್ಖನನಗಳು ಇತ್ಯಾದಿ:**—ಯಾವುದೇ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಬಹುದಾದಂಥ ನಿಯಮಗಳು ಅಥವಾ ಕೊಡಬಹುದಾದಂಥ ನಿರ್ದೇಶನಗಳು ಯಾವುವಾದರೂ ಇದ್ದರೆ, ಅವುಗಳಿಗನುಸಾರವಾಗಿ ಹೊರತು ಸಂರಕ್ಷಿತ ಪ್ರದೇಶವಾಗಿರದ ಯಾವುದೇ ಪ್ರದೇಶದಲ್ಲಿ ಪುರಾತತ್ವ ಉದ್ದೇಶಗಳಿಗಾಗಿ ಯಾವುವೇ ಉತ್ಖನನ ಅಥವಾ ಅಂತಹ ಇತರ ಕಾರ್ಯಾಚರಣೆಯನ್ನು ಕೈಗೊಳ್ಳತಕ್ಕುದಲ್ಲ ಅಥವಾ ಕೈಗೊಳ್ಳಲು ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸತಕ್ಕುದಲ್ಲ.

## ಪುರಾತನ ವಸ್ತುಗಳ ಸಂರಕ್ಷಣೆ

**25.** ಪುರಾತನ ವಸ್ತುಗಳ ಸ್ಥಳ ಬದಲಾಯಿಸುವಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರದ ಅಧಿಕಾರ:—(1) ಕೇಂದ್ರ ಸರ್ಕಾರವು ಯಾವುದೇ ಪುರಾತನ ವಸ್ತುಗಳನ್ನು ಅಥವಾ ಯಾವುದೇ ವರ್ಗದ ಪುರಾತನ ವಸ್ತುಗಳನ್ನು ಕೇಂದ್ರ ಸರ್ಕಾರದ ಮಂಜೂರಾತಿಯಿಲ್ಲದೆ ಅವುಗಳು ಇರುವ ಸ್ಥಳದಿಂದ ಸ್ಥಳ ಬದಲಾಯಿಸ ಕೂಡದೆಂದು ಪರ್ಯಾಲೋಚಿಸಿದರೆ, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಯಾವುದೇ ಪುರಾತನ ವಸ್ತು ಅಥವಾ ಯಾವುದೇ ವರ್ಗದ ಅಂಥ ಪುರಾತನ ವಸ್ತುವನ್ನು ಮಹಾನಿರ್ದೇಶಕನ ಬರಹದಲ್ಲಿನ ಅನುಮತಿಯೊಂದಿಗೆ ಹೊರತು ಸ್ಥಳ ಬದಲಾಯಿಸತಕ್ಕುದಲ್ಲವೆಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅನುಮತಿಗಾಗಿನ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕುದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕುದು.

(3) ಅನುಮತಿಯನ್ನು ನಿರಾಕರಿಸುವ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು. ಅದರ ತೀರ್ಮಾನವು ಅಂತಿಮವಾಗಿರತಕ್ಕುದು.

**26.** ಕೇಂದ್ರ ಸರ್ಕಾರದಿಂದ ಪುರಾತನ ವಸ್ತುಗಳ ಖರೀದಿ:—(1)ಕೇಂದ್ರ ಸರ್ಕಾರವು, 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಮೂದಿಸಿದ ಯಾವುದೇ ಪುರಾತನ ವಸ್ತುವು ನಾಶವಾಗುವ, ತೆಗೆದುಹಾಕುವ, ಹಾನಿಗೊಳಗಾಗುವ, ದುರುಪಯೋಗವಾಗುವ ಅಥವಾ ಕ್ಷೀಣವಾಗುವ ಅವಕಾಶವಿರುವ ಅಪಾಯವಿದೆಯೆಂದು ಕೇಂದ್ರ ಸರ್ಕಾರವು ಶಂಕಿಸಿದರೆ ಅಥವಾ ಅದರ ಐತಿಹಾಸಿಕ ಅಥವಾ ಪುರಾವಸ್ತು ಮಹತ್ವದ ಕಾರಣದಿಂದಾಗಿ ಅಂಥ ಪುರಾತನ

ವಸ್ತುವನ್ನು ಸಾರ್ವಜನಿಕ ಸ್ಥಳದಲ್ಲಿ ಸಂರಕ್ಷಿಸುವುದು ಅಪೇಕ್ಷಣೀಯವೆಂದು ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು ಅಂಥ ಪ್ರಾಚೀನ [illegible] ತೀರ್ಮಾನದ ಪುರಾತನ ವಸ್ತುವಿನ [illegible]

(2) (1) [illegible] ನೋಟೀಸನ್ನು [illegible] ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕುದು.

(3) ಈ ಪ್ರಕರಣದ ಮೂಲಕ ಕೊಟ್ಟ ಕಡ್ಡಾಯ ಅರ್ಜನೆಯ ಅಧಿಕಾರವು ಪ್ರಾಮಾಣಿಕ ಧಾರ್ಮಿಕ ಆಚರಣೆಗಾಗಿ ವಾಸ್ತವಿಕವಾಗಿ ಉಪಯೋಗಿಸಿದ ಯಾವುದೇ ಪ್ರತಿಮೆ ಅಥವಾ ಪ್ರತೀಕಕ್ಕೆ ವ್ಯಾಪ್ತವಾಗತಕ್ಕದಲ್ಲ.

ನಷ್ಟ ಪರಿಹಾರದ ತತ್ವಗಳು

**27.** ನಷ್ಟ ಅಥವಾ ಹಾನಿಗಾಗಿ ಪರಿಹಾರ :— ಭೂಮಿಯ ಯಾವ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ, ಅಂಥ ಭೂಮಿಯ ಮೇಲೆ ಯಾವುದೇ ಪ್ರವೇಶದ ಅಥವಾ ಉತ್ಖನನಗಳ ಅಥವಾ ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಯಾವುದೇ ಇತರ ಅಧಿಕಾರದ ಚಲಾವಣೆಯ ಕಾರಣದಿಂದಾಗಿ ಆ ಭೂಮಿಯಿಂದ ಯಾವುದೇ ನಷ್ಟ ಅಥವಾ ಹಾನಿ ಅಥವಾ ಲಾಭಗಳ ಯಾವುದೇ ಇಳಿತಾಯ ಉಂಟಾಗಿದೆಯೋ ಆ ಯಾವನೇ ಒಡೆಯ ಅಥವಾ ಅಧಿಭೋಗದಾರನಿಗೆ ಕೇಂದ್ರ ಸರ್ಕಾರವು ಅಂಥ ನಷ್ಟ, ಹಾನಿ ಅಥವಾ ಲಾಭಗಳ ಇಳಿತಾಯಕ್ಕಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**28.** ಮಾರುಕಟ್ಟೆ ಮೌಲ್ಯ ಅಥವಾ ಪರಿಹಾರದ ನಿರ್ಧಾರಣೆ :— (1) ಈ ಅಧಿನಿಯಮದ ಮೇರೆಗೆ ಮಾರುಕಟ್ಟೆ ಮೌಲ್ಯದಲ್ಲಿ ಯಾವ ಸ್ವತ್ತನ್ನು ಖರೀದಿಸಲು ಕೇಂದ್ರ ಸರ್ಕಾರವನ್ನು ಅಧಿಕೃತಗೊಳಿಸಲಾಗಿದೆಯೋ ಆ ಯಾವುದೇ ಸ್ವತ್ತಿನ ಅಂಥ ಮಾರುಕಟ್ಟೆ ಮೌಲ್ಯ ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸಂದಾಯ ಮಾಡಬೇಕಾದ ಪರಿಹಾರವನ್ನು, ಅಂಥ ಮಾರುಕಟ್ಟೆ ಮೌಲ್ಯ ಅಥವಾ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸುವಲ್ಲಿ, ಭೂ ಅರ್ಜನಾ ಅಧಿನಿಯಮ, 1894 (1894ರ 1)ರ 3,5,8, ರಿಂದ 34 45 ರಿಂದ 47,51 ಮತ್ತು 52ನೇ ಪ್ರಕರಣಗಳಲ್ಲಿ ಅವುಗಳನ್ನು ಅನ್ವಯಗೊಳಿಸಲು ಸಾಧ್ಯವಾಗಬಹುದಾದ ಮಟ್ಟಿಗೆ ಉಪಬಂಧಿತವಾದ ರೀತಿಯಲ್ಲಿ ನಿಶ್ಚಿತಪಡಿಸಿಕೊಳ್ಳತಕ್ಕದು:

ಪರಂತು, ಸದರಿ ಭೂ ಅರ್ಜನಾ ಅಧಿನಿಯಮದ ಮೇರೆಗೆ ವಿಚಾರಣೆಯನ್ನು ನಡೆಸುವಾಗ ಕಲೆಕ್ಟರನು ಇಬ್ಬರು ನಿರ್ಧಾರಕರಿಂದ ಸಹಾಯವನ್ನು ಪಡೆಯತಕ್ಕದು; ಅವರಲ್ಲೊಬ್ಬನು ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತನಾಗಿರುವ ಸಕ್ಷಮ ವ್ಯಕ್ತಿಯಾಗಿರತಕ್ಕದು ಮತ್ತು ಇನ್ನೊಬ್ಬನು ಒಡೆಯನಿಂದ ನಾಮನಿರ್ದೇಶಿತನಾದ ವ್ಯಕ್ತಿಯಾಗಿರತಕ್ಕುದು ಅಥವಾ ಕಲೆಕ್ಟರನು ಈ ಬಗ್ಗೆ ನಿಗದಿಪಡಿಸಬಹುದಾದಂಥ ಸೂಕ್ತ ಕಾಲದೊಳಗೆ ಒಡೆಯನು ನಿರ್ಧಾರಕನನ್ನು ನಾಮನಿರ್ದೇಶಿಸಲು ತಪ್ಪಿದ ಸಂದರ್ಭದಲ್ಲಿ ಕಲೆಕ್ಟರನಿಂದ ನಾಮನಿರ್ದೇಶಿತನಾದ ವ್ಯಕ್ತಿಯಾಗಿರತಕ್ಕದು.

(2) ಯಾವ ಪುರಾತನ ವಸ್ತುವಿಗೆ ಸಂಬಂಧಿಸಿದಂತೆ 23ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಥವಾ 26ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಕಡ್ಡಾಯ ಅರ್ಜನೆಗಾಗಿ ಆದೇಶವನ್ನು ಮಾಡಲಾಗಿದೆಯೋ ಆ ಪ್ರತಿಯೊಂದು ಪುರಾತನ ವಸ್ತುವಿನ ಬಗ್ಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕುದು ಮತ್ತು ಪುರಾತನ ವಸ್ತುಗಳು ಮತ್ತು ಕಲಾನಿಕ್ಷೇಪ ಅಧಿನಿಯಮ, 1972ರ 20 ಮತ್ತು 22ನೇ ಪ್ರಕರಣಗಳ ಉಪಬಂಧಗಳು ಅದಷ್ಟು ಮಟ್ಟಿಗೆ ಅಂಥ ನಷ್ಟ ಪರಿಹಾರದ ನಿರ್ಧಾರ ಮತ್ತು ಸಂದಾಯದ ಸಂಬಂಧದಲ್ಲಿ ಅಧಿನಿಯಮದ 19ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಅರ್ಜಿಸಲಾದ ಯಾವುದೇ ಪುರಾತನವಸ್ತು ಅಥವಾ ಕಲಾನಿಕ್ಷೇಪದ ಬಗೆಗಿನ ಪರಿಹಾರದ ನಿರ್ಧಾರ ಮತ್ತು ಸಂದಾಯದ ಸಂದರ್ಭದಲ್ಲಿ ಅವುಗಳು ಅನ್ವಯಿಸುವಂತೆಯೇ ಅನ್ವಯಿಸತಕ್ಕದು.

ಸಂಕೀರ್ಣ

**29.** ಅಧಿಕಾರಗಳ ಪ್ರತ್ಯಾಯೋಜನೆ :— ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು, ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ—

(ಕ) ಕೇಂದ್ರ ಸರ್ಕಾರಕ್ಕೆ ಅಧೀನನಾದಂಥ ಅಧಿಕಾರಿ ಅಥವಾ ಪ್ರಾಧಿಕಾರವು, ಅಥವಾ

(ಖ) ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಅಧೀನನಾದಂಥ ಅಧಿಕಾರಿ ಅಥವಾ ಪ್ರಾಧಿಕಾರವು

— ಸಹ ಚಲಾಯಿಸತಕ್ಕುದೆಂದು ನಿರ್ದೇಶಿಸಬಹುದು.

**30.** ದಂಡಗಳು :— (i) ಸಂರಕ್ಷಿತ ಸ್ಮಾರಕವನ್ನು ನಾಶಪಡಿಸುವ, ತೆಗೆದುಹಾಕುವ, ಕ್ಷತಿಗೊಳಿಸುವ, ಬದಲಾಯಿಸುವ, ವಿರೂಪಗೊಳಿಸುವ, ಗಂಡಾಂತರಕ್ಕೀಡುಮಾಡುವ ಅಥವಾ ದುರುಪಯೋಗಪಡಿಸುವ, ಅಥವಾ

(ii) ಸಂರಕ್ಷಿತ ಸ್ಮಾರಕದ ಒಡೆಯ ಅಥವಾ ಅಧಿಭೋಗದಾರನಾಗಿದ್ದು 9ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಥವಾ 10ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಉಲ್ಲಂಘಿಸುವ; ಅಥವಾ

(iii) ಯಾವುದೇ ಸಂರಕ್ಷಿತ ಸ್ಮಾರಕದಿಂದ ಯಾವುದೇ ಶಿಲ್ಪ, ಕೆತ್ತನೆ, ಪ್ರತಿಮೆ, ಉಬ್ಬುಚಿತ್ರ, ಚಿತ್ರ, ಶಾಸನ ಅಥವಾ ಇತರ ಅಂತಹುದೇ ವಸ್ತುವನ್ನು ಸಂರಕ್ಷಿತ ಸ್ಮಾರಕದಿಂದ ಸ್ಥಳಾಂತರಗೊಳಿಸುವ, ಅಥವಾ

(iv) 19ನೇ ಪ್ರಕರಣದ (1)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಯಾವುದೇ ಕಾರ್ಯವನ್ನು ಮಾಡುವ ಯಾವನೇ ಆಗಲಿ

— ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(2) 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಉಲ್ಲಂಘಿಸಿ ಯಾವುದೇ ಪುರಾತನವಸ್ತುವನ್ನು ಸ್ಥಳಬದಲಾಯಿಸುವ ಯಾವನೇ ವ್ಯಕ್ತಿಯು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದು ಮತ್ತು ಯಾವುದೇ ಅಂಥ ಉಲ್ಲಂಘನೆಯ ಬಗ್ಗೆ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು ಆದೇಶದ ಮೂಲಕ ಆ ಪುರಾತನ ವಸ್ತುವನ್ನು ಯಾವ ಸ್ಥಳದಿಂದ ಬದಲಾಯಿಸಲಾಯಿತೋ ಆ ಸ್ಥಳದಲ್ಲಿ ಪುನಃ ಅದನ್ನು ತಂದಿಡುವಂತೆ ಅಂಥ ವ್ಯಕ್ತಿಗೆ ನಿರ್ದೇಶಿಸಬಹುದು.

**31.** ಅಪರಾಧಗಳ ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ:—ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ವಿಚಾರಣೆ ಮಾಡತಕ್ಕದ್ದಲ್ಲ.

**32.** ಕೆಲವು ಅಪರಾಧಗಳು ಸಂಜ್ಞೇಯವಾಗಿರತಕ್ಕದು :—ದಂಡಪ್ರಕ್ರಿಯಾ ಸಂಹಿತೆ, 1898ರಲ್ಲಿ (1898ರ 5) ಏನೇ ಅಡಕವಾಗಿದ್ದಾಗ್ಯೂ, 30ನೇ ಪ್ರಕರಣದ (1)ನೇ ಉಪ-ಪ್ರಕರಣದ (i)ನೇ ಖಂಡ ಅಥವಾ (iii)ನೇ ಖಂಡದ ಮೇರೆಗಿನ ಅಪರಾಧವನ್ನು ಆ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಸಂಜ್ಞೇಯ ಅಪರಾಧವೆಂದು ಭಾವಿಸತಕ್ಕದು.

**33.** ಜುಲ್ಮಾನೆಯ ಸಂಬಂಧದಲ್ಲಿ ವಿಶೇಷ ಉಪಬಂಧ :— ದಂಡಪ್ರಕ್ರಿಯಾ ಸಂಹಿತೆ, 1898 (1898ರ5) 32ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಬಗ್ಗೆ ರಾಜ್ಯಸರ್ಕಾರದಿಂದ ವಿಶೇಷವಾಗಿ ಅಧಿಕೃತನಾದ ಪ್ರಥಮ ದರ್ಜೆ ಯಾವನೇ ಮ್ಯಾಜಿಸ್ಟ್ರೇಟ್ ಮತ್ತು ಯಾವನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನಿಗೆ, ಈ ಅಧಿನಿಯಮದ ಮೇರೆಗೆ ಎರಡು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡನೀಯನಾಗಬಹುದಾದಂಥ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾದ ಯಾವನೇ ವ್ಯಕ್ತಿಗೆ ಎರಡು ಸಾವಿರ ರೂಪಾಯಿಗಳಿಗೆ ಮೀರುವ ಶಿಕ್ಷೆಯನ್ನು ವಿಧಿಸಲು ಕಾನೂನು ಬದ್ಧವಾಗಿರತಕ್ಕದು.

**34.** ಸರ್ಕಾರಕ್ಕೆ ಬರಬೇಕಾದ ಮೊಬಲಗುಗಳನ್ನು ವಸೂಲು ಮಾಡುವುದು :— ಈ ಅಧಿನಿಯಮದ ಮೇರೆಗೆ ಯಾವನೇ ವ್ಯಕ್ತಿಯಿಂದ ಸರ್ಕಾರಕ್ಕೆ ಬರಬೇಕಾದ ಯಾವುದೇ ಮೊಬಲಗನ್ನು ಮಹಾನಿರ್ದೇಶಕ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಪುರಾತತ್ವ ಅಧಿಕಾರಿಯು ಕೊಟ್ಟ ಪ್ರಮಾಣಪತ್ರದ ಮೇಲೆ ಭೂ ಕಂದಾಯದ ಬಾಕಿಯಂತೆ ಅದೇ ರೀತಿಯಲ್ಲಿ ವಸೂಲು ಮಾಡಬಹುದು.

**35.** ರಾಷ್ಟ್ರೀಯ ಮಹತ್ವವುಳ್ಳದ್ದಾಗಿರುವುದು ಕೊನೆಗೊಂಡಿರುವ ಪ್ರಾಚೀನ ಸ್ಮಾರಕಗಳು, ಇತ್ಯಾದಿ :— ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವವುಳ್ಳದ್ದೆಂದು ಘೋಷಿಸಿದ ಯಾವುದೇ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳು ರಾಷ್ಟ್ರೀಯ ಮಹತ್ವವುಳ್ಳದ್ದಾಗಿರುವುದು ಕೊನೆಗೊಂಡಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಂದರ್ಭಾನುಸಾರ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳು ಈ ಅಧಿನಿಯಮದ ಉದ್ದೇಶಕ್ಕಾಗಿ ರಾಷ್ಟ್ರೀಯ ಮಹತ್ವವುಳ್ಳದ್ದಾಗಿರುವುದು ಕೊನೆಗೊಂಡಿದೆ ಎಂದು ಘೋಷಿಸಬಹುದು.

**36.** ತಪ್ಪುಗಳು, ಇತ್ಯಾದಿಗಳನ್ನು ಸರಿಪಡಿಸುವ ಅಧಿಕಾರ :— ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವವುಳ್ಳದ್ದೆಂದು ಘೋಷಿಸಲಾದ ಯಾವುದೇ ಪ್ರಾಚೀನ ಸ್ಮಾರಕ ಅಥವಾ ಪುರಾತತ್ವ ಸ್ಥಳ ಮತ್ತು ಅವಶೇಷಗಳ ವಿವರಣೆಯಲ್ಲಿನ ಯಾವುದೇ ಲಿಪಿಕ ತಪ್ಪು, ಸ್ಪಷ್ಟತಪ್ಪು ಅಥವಾ ಆಕಸ್ಮಿಕ ಕೈತಪ್ಪು ಅಥವಾ ಲೋಪದಿಂದ ಉದ್ಭವಿಸಿದ ತಪ್ಪನ್ನು ಯಾವುದೇ ಕಾಲದಲ್ಲಿ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ಸರಿಪಡಿಸಬಹುದು.

**37.** ಅಧಿನಿಯಮದ ಮೇರೆಗೆ ಕೈಗೊಳ್ಳಲಾದ ಕ್ರಮದ ರಕ್ಷಣೆ :— ಈ ಅಧಿನಿಯಮದಿಂದ ಪ್ರದತ್ತವಾದ ಯಾವುದೇ ಅಧಿಕಾರದ ಚಲಾವಣೆಯಲ್ಲಿ ಮಾಡಿದ ಅಥವಾ ಸದ್ಭಾವನೆಯಿಂದ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವನೇ ಲೋಕ ನೌಕರನ ವಿರುದ್ಧ ನಷ್ಟ ಪರಿಹಾರಕ್ಕಾಗಿನ ಯಾವುದೇ ದಾವೆ ಮತ್ತು ಯಾವುದೇ ಕ್ರಿಮಿನಲ್ ವ್ಯವಹರಣೆಯು ಇರತಕ್ಕದ್ದಲ್ಲ.

**38.** ನಿಯಮ ರಚನಾಧಿಕಾರ :— (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:—

(a) [illegible] ಅಥವಾ ಲೈಸೆನ್ಸ್ ಕೊಡುವ ಮೂಲಕ ಅಥವಾ [illegible] ಅಥವಾ [illegible] ಅಥವಾ ಅಂಥ ಸ್ಮಾರಕಕ್ಕೆ ಹೊಂದಿಕೊಂಡಿರುವ [illegible] ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕುವಿಕೆ;

(ಖ) ಸಂರಕ್ಷಿತ ಪ್ರದೇಶಗಳಲ್ಲಿ ಪುರಾತತ್ವದ ಉದ್ದೇಶಗಳಿಗಾಗಿ ಉತ್ಖನನಗಳನ್ನು ಮಾಡಲು ಲೈಸೆನ್ಸ್‌ಗಳನ್ನು ಮತ್ತು ಅನುಮತಿಯನ್ನು ಕೊಡುವುದು, ಅಂಥ ಲೈಸೆನ್ಸ್‌ಗಳನ್ನು ಯಾವ ಪ್ರಾಧಿಕಾರಗಳು ಮತ್ತು ಯಾವ ಪರಿಬಂಧಗಳು ಹಾಗೂ ಷರತ್ತುಗಳಿಗೊಳಪಟ್ಟು ಕೊಡಬಹುದು ಮತ್ತು ಲೈಸೆನ್ಸ್‌ದಾರರಿಂದ ಭದ್ರತೆಗಳನ್ನು ತೆಗೆದುಕೊಳ್ಳುವುದು ಮತ್ತು ಅಂಥ ಲೈಸೆನ್ಸ್‌ಗಳಿಗೆ ವಿಧಿಸಬಹುದಾದ ಫೀಜು;

(ಗ) ಸಂರಕ್ಷಿತ ಸ್ಮಾರಕಕ್ಕೆ ಸಾರ್ವಜನಿಕರಿಗೆ ಪ್ರವೇಶಾಧಿಕಾರ ಮತ್ತು ಅದಕ್ಕಾಗಿ ವಿಧಿಸಬೇಕಾದ ಫೀಜು ಯಾವುದಾದರೂ ಇದ್ದರೆ ಅದು;

(ಘ) 23ನೇ ಪ್ರಕರಣದ (1)ನೇ ಉಪ-ಪ್ರಕರಣದ (ಕ) ಖಂಡದ ಮೇರೆಗೆ ಪುರಾತತ್ವ ಅಧಿಕಾರಿ ಅಥವಾ ಲೈಸೆನ್ಸ್‌ದಾರನ ವರದಿಯ ನಮೂನೆ ಮತ್ತು ಅದರ ಒಳಾಂಶಗಳು;

(ಙ) 19ನೇ ಪ್ರಕರಣ ಅಥವಾ 25ನೇ ಪ್ರಕರಣದ ಮೇರೆಗೆ ಅನುಮತಿಗಾಗಿ ಮಾಡಿಕೊಳ್ಳಬಹುದಾದ ಅರ್ಜಿಯ ನಮೂನೆ ಮತ್ತು ಅವುಗಳು ಒಳಗೊಂಡಿರಬೇಕಾದ ವಿವರಗಳು;

(ಚ) ಈ ಅಧಿನಿಯಮದ ಮೇರೆಗೆ ಅಪೀಲುಗಳನ್ನು ಸಲ್ಲಿಸುವ ನಮೂನೆ ಮತ್ತು ರೀತಿ ಮತ್ತು ಅವುಗಳನ್ನು ಸಲ್ಲಿಸಬಹುದಾದ ಕಾಲ;

(ಛ) ಈ ಅಧಿನಿಯಮದ ಮೇರೆಗಿನ ಯಾವುದೇ ಆದೇಶ ಅಥವಾ ನೋಟೀಸಿನ ಜಾರಿಯ ರೀತಿ;

(ಜ) ಪುರಾತತ್ವದ ಉದ್ದೇಶಗಳಿಗಾಗಿ ಉತ್ಖನನಗಳು ಮತ್ತು ಅಂತಹುದೇ ಇತರ ಕಾರ್ಯಾಚರಣೆಗಳನ್ನು ನಡೆಸಬಹುದಾದ ರೀತಿ;

(ಝ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವು, ಅದರ ಉಲ್ಲಂಘನೆಯು,—

(i) (2)ನೇ ಉಪ-ಪ್ರಕರಣದ (ಕ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ ಮೂರು ತಿಂಗಳ ವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ;

(ii) (2)ನೇ ಉಪ-ಪ್ರಕರಣದ (ಖ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ;

(iii) (2)ನೇ ಉಪ-ಪ್ರಕರಣದ (ಗ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ

—ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮೂವತ್ತು ದಿವಸಗಳಿಗಿಂತ ಕಡಿಮೆಯಿಲ್ಲದಂತೆ ಇಡತಕ್ಕುದು ಮತ್ತು ಅವುಗಳನ್ನು ಹಾಗೆ ಇಟ್ಟ ಅಧಿವೇಶನ ಅಥವಾ ಅದರ ನಿಕಟ ತರುವಾಯದ ಅಧಿವೇಶನದ ಕಾಲದಲ್ಲಿ ಸಂಸತ್ತು ಮಾಡಬಹುದಾದಂಥ ಮಾರ್ಪಾಟುಗಳಿಗೆ ಅವು ಒಳಪಟ್ಟಿರತಕ್ಕುದು.

**39.** ನಿರಸನಗಳು ಮತ್ತು ಉಳಿಸುವಿಕೆಗಳು:—(1) ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷಗಳ (ರಾಷ್ಟ್ರೀಯ ಮಹತ್ವದ ಘೋಷಣೆ) ಅಧಿನಿಯಮ, 1951 (1951ರ 71)ರ ಮತ್ತು ರಾಜ್ಯಗಳ ಪುನರಚನಾ ಅಧಿನಿಯಮ, 1956 (1956ರ 37)ರ 126ನೇ ಪ್ರಕರಣ ಇವುಗಳನ್ನು ಈ ಮೂಲಕ ನಿರಸಿತಗೊಳಿಸಲಾಗಿದೆ.

(2) ಪ್ರಾಚೀನ ಸ್ಮಾರಕಗಳ ಪರಿರಕ್ಷಣಾ ಅಧಿನಿಯಮ, 1904 (1904ರ 7)ವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವವುಳ್ಳವುಗಳೆಂದು ಘೋಷಿಸಿದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಸಂಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಅಥವಾ ಮಾಡಲು ಲೋಪಿಸಿದ ಕಾರ್ಯಗಳಿಗೆ ಸಂಬಂಧಪಟ್ಟಂತೆ ಹೊರತು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕುದು.